# MIT First Grade College

Affiliated to University of Mysore

169/1, New No.29/1, 3rd Stage, Industrial Suburb, Fort Mohalla, Mysuru-570 008

Ph : 0821-2331722 e-mail: mitfgcmysore@gmail.com, www.mitfgc.in


Ref. No. : MITFGC/

Date: 23-9-202

**Translation letter for the change of name of the College.**

Dear Sir/Mam,

The letter dated 05.09.2017, bearing reference no. ED 83 UMV, 2016 is concerned with the change of the name of the college and the trust. It's addressed to the Vice-Chancellor of University of Mysore from Government Secretary of Higher education, Bangalore. Further the letter is intimated to the trust and the management of the college.

The change of name of trust and the college is as follows

| | Present Name (From) | Renamed as(To) |
|---|---|---|
| Trust | Sishuvihar Institutions | Maharaja Education Trust®, (M.I.T)<br>#48, Kamakshi Hospital Road<br>Kuvempunagar,<br>Mysore- |
| College | Gopalaswamy college of Professional Studies<br>#169/1, New NO. 29/1.<br>III Stage<br>Industrial Area<br>Court Mohhala, Mysore-570008 | MIT First Grade College<br>#169/2, III Stage<br>Industrial Suburb<br>FortMohalla,<br>Manadavadi Road<br>Mysore-570008 |

Thanking you

Yours Sincerely

Principal

PRINCIPAL
M.I.T. FIRST GRADE CO...
# F-29/1, 3rd Stage, Industrial ...
Fort Mohalla, Mysuru-570 008

# MIT First Grade College

Affiliated to University of Mysore
169/1, New No.29/1, 3rd Stage, Industrial Suburb, Fort Mohalla, Mysuru-570 008
Ph : 0821-2331722 e-mail: mitfgcmysore@gmail.com, www.mitfgc.in

Ref. No. : MITFGC/

Date: 23-9-2022

Respected Sir/Mam

Sub: Granting of New for Under-Graduation programmes from the academic year 2009-10.

The letter dated 07/07/2009, bearing reference no. CDC 2/213/2009-10 is related to the permission granted by the Administrative section, University of Mysore, Mysore to establish a college for Under-Graduation programmes in the name of **"Gopalaswamy College of Professional Studies"**.

It's been approved after following below mentioned administrative procedures.

- Visit of Local inquiry committee
- Inspection of the site of the college on 14-02-2009.
- Academic council and Syndicate members' approval on 21-04-2009 to 23-04-2009.
- Discussion on the same by College Development Council on the letter bearing ref. no. 2/213/2009-10 Mysore.
- Principal Secretary, Education department (Higher education Institutions, Bangalore) reference letter No. ED 55 UMV, dated 27.6.2009.

The college is permitted to start with the following courses from the academic year 2009-10 onwards

| Sl.No | Course/Programme | Languages | Subjects | Section | Student approval Limit |
|---|---|---|---|---|---|
| 1. | B.B.M | English, Kannada, Hindi and Sanskrit | University Syllabus | 01 | 60 |
| 2. | B.C.A. | English, Kannada, Hindi and Sanskrit | University Syllabus | 01 | 40 |

Copy of the LIC report is enclosed.

Thanking You

Yours Sincerely

Principal

PRINCIPAL
M.I.T. FIRST GRADE COLLEGE
# F-29/1, 3rd Stage, Industrial Suburb
Fort Mohalla, Mysuru-570 008

ದೂರವಾಣಿ: 2419677/2419361
ಫ್ಯಾಕ್ಸ್: 0821-2419363/2419301

ಇ-ಮೇಲ್: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570 005

(Re-accredited by NAAC at "A" Grade with a CGPA of 3.47)
(Ranked 57th overall and 36th among Universities in NIRF ranking 2017)

ಮಾನ್ಯರೆ

ವಿಷಯ: ಮೈಸೂರಿನ ಗೋಪಾಲಸ್ವಾಮಿ ಕಾಲೇಜ್ ಆಫ್ ಪ್ರೊಫೆಷನಲ್ ಸ್ಟಡೀಸ್ ಕಾಲೇಜಿನ ಹೆಸರು ಮತ್ತು ಈ ಕಾಲೇಜನ್ನು ನಡೆಸುತ್ತಿರುವ ಟ್ರಸ್ಟ್‌ನ ಹೆಸರನ್ನು ಬದಲಾವಣೆ ಮಾಡುವ ಬಗ್ಗೆ

ಉಲ್ಲೇಖ: 1) ಗೋಪಾಲಸ್ವಾಮಿ ಶಿಶುವಿಹಾರ ಇನ್ಸ್‌ಟಿಟ್ಯೂಷನ್, ಲಕ್ಷ್ಮಿಪುರಂ, ಮೈಸೂರು ಇವರ ಪತ್ರ ದಿನಾಂಕ 04.03.2016
2) ದಿನಾಂಕ 25.07.2016ರ ಸಿಂಡಿಕೇಟ್ ಸಭೆಯ ನಿರ್ಣಯ
3) ದಿನಾಂಕ 28.07.2016ರ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಇಡಿ 83 ಯುಎಂವಿ 2016 ದಿನಾಂಕ 05.09.2017

* * * * *

## ಪ್ರಸ್ತಾವನೆ :

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ದ 59ನೇ ಪ್ರಕರಣದ (5)ನೇ ಉಪಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು (ಉಲ್ಲೇಖ 4) ಇವರ ಆದೇಶದನ್ವಯ ಶಿಶುವಿಹಾರ ಸಂಸ್ಥೆ, ಡಾ. ಗೋಪಾಲಸ್ವಾಮಿ ರಸ್ತೆ, ಲಕ್ಷ್ಮಿಪುರಂ, ಮೈಸೂರು ಇವರು ನಡೆಸುತ್ತಿರುವ ಮೈಸೂರಿನ ಗೋಪಾಲಸ್ವಾಮಿ ಕಾಲೇಜ್ ಆಫ್ ಪ್ರೊಫೆಷನಲ್ ಸ್ಟಡೀಸ್ ಕಾಲೇಜನ್ನು ಮಹಾರಾಜ ಎಜುಕೇಷನ್ ಟ್ರಸ್ಟ್(ರಿ), ಮೈಸೂರು ಇವರ ಸಂಸ್ಥೆಗೆ ವಹಿಸಿ ಕಾಲೇಜಿನ ಹೆಸರನ್ನು ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, #169/2, 3ನೇ ಹಂತ, ಪೋರ್ಟ್ ಮೊಹಲ್ಲಾ, ಮಾನಂದವಾಡಿ ರಸ್ತೆ, ಮೈಸೂರು ಎಂದು ಬದಲಾಯಿಸಿಕೊಳ್ಳಲು ಅನುಮತಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ ಸಿಡಿಸಿ-2/45/2015-16 ದಿನಾಂಕ ೨೩.09.2017**

ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆ ಹಾಗೂ ಉಲ್ಲೇಖ 4ರ ರಾಜ್ಯ ಸರ್ಕಾರದ ಅನುಮತಿ ಮೇರೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ 59ನೇ ಪ್ರಕರಣದ (5)ನೇ ಉಪಪ್ರಕರಣದನ್ವಯ ಶಿಶುವಿಹಾರ ಸಂಸ್ಥೆ, ಡಾ. ಗೋಪಾಲಸ್ವಾಮಿ ರಸ್ತೆ, ಲಕ್ಷ್ಮಿಪುರಂ, ಮೈಸೂರು ಇವರು ನಡೆಸುತ್ತಿರುವ ಮೈಸೂರಿನ ಗೋಪಾಲಸ್ವಾಮಿ ಕಾಲೇಜ್ ಆಫ್ ಪ್ರೊಫೆಷನಲ್ ಸ್ಟಡೀಸ್ ಕಾಲೇಜನ್ನು ಮಹಾರಾಜ ಎಜುಕೇಷನ್ ಟ್ರಸ್ಟ್(ರಿ), ಮೈಸೂರು ಇವರ ಸಂಸ್ಥೆಗೆ ವಹಿಸಿ ಕಾಲೇಜಿನ ಹೆಸರನ್ನು ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, #169/2, 3ನೇ ಹಂತ, ಪೋರ್ಟ್ ಮೊಹಲ್ಲಾ, ಮಾನಂದವಾಡಿ ರಸ್ತೆ, ಮೈಸೂರು ಎಂದು ಈ ಕೆಳಕಂಡಂತೆ ಬದಲಾಯಿಸಿಕೊಳ್ಳಲು ಅನುಮತಿಸಲಾಗಿದೆ.

| ಕ್ರ. ಸಂ. | ಪ್ರಸ್ತುತ ಇರುವ ಟ್ರಸ್ಟ್‌ನ ಮತ್ತು ಕಾಲೇಜಿನ ಹೆಸರು ಮತ್ತು ವಿಳಾಸ | ಬದಲಾವಣೆ ಮಾಡಬೇಕಾಗಿರುವ ಟ್ರಸ್ಟ್‌ನ ಮತ್ತು ಕಾಲೇಜಿನ ಹೆಸರು |
|---|---|---|
| 1 | **ಟ್ರಸ್ಟ್‌ನ ಹೆಸರು**<br>ಶಿಶುವಿಹಾರ ಸಂಸ್ಥೆ,<br>ಡಾ. ಗೋಪಾಲಸ್ವಾಮಿ ರಸ್ತೆ, ಲಕ್ಷ್ಮಿಪುರಂ, ಮೈಸೂರು | ಮಹಾರಾಜ ಎಜುಕೇಷನ್ ಟ್ರಸ್ಟ್(ರಿ),<br>(ಎಂ.ಇ.ಟಿ), # 48, ಕಾಮಾಕ್ಷಿ ಆಸ್ಪತ್ರೆ ರಸ್ತೆ,<br>13ನೇ ಮುಖ್ಯ ರಸ್ತೆ, ಕುವೆಂಪುನಗರ, ಮೈಸೂರು |
| 2 | **ಕಾಲೇಜಿನ ಹೆಸರು**<br>ಗೋಪಾಲಸ್ವಾಮಿ ಕಾಲೇಜ್ ಆಫ್ ಪ್ರೊಫೆಷನಲ್ ಸ್ಟಡೀಸ್,<br>#169/1, ಹೊಸ ಸಂಖ್ಯೆ ಎಫ್29/1, 3ನೇ ಹಂತ, ಕೈಗಾರಿಕಾ ಪ್ರದೇಶ, ಫೋರ್ಟ್ ಮೊಹಲ್ಲಾ, ಮೈಸೂರು-570 008 | ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು,<br>#169/2, 3ನೇ ಹಂತ, ಪೋರ್ಟ್ ಮೊಹಲ್ಲಾ,<br>ಮಾನಂದವಾಡಿ ರಸ್ತೆ, ಮೈಸೂರು |

ಇನ್ನು ಮುಂದೆ ಕಾಲೇಜಿನ ಮತ್ತು ಟ್ರಸ್ಟ್‌ನ ಪತ್ರ ವ್ಯವಹಾರಗಳನ್ನು ಬದಲಾದ ವಿಳಾಸದಲ್ಲಿ ನಡೆಸಲು ಆದೇಶಿಸಲಾಗಿದೆ.

ಪು.ತಿ.ನೋ.

CDC-2

27/9/17

**ಷರತ್ತುಗಳು:**

1. ಈಗಾಗಲೇ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಖಚಿತಪಡಿಸಿಕೊಳ್ಳತಕ್ಕದ್ದು. ಯಾವುದೇ ವಿದ್ಯಾರ್ಥಿಗಳು ಬಯಸಿದ್ದಲ್ಲಿ ಅವರನ್ನು ಹತ್ತಿರದ ಕಾಲೇಜುಗಳಿಗೆ ವರ್ಗಾಯಿಸತಕ್ಕದ್ದು. ಅವರ ಶೈಕ್ಷಣಿಕ ದಾಖಲೆಗಳನ್ನು ಸಹ ಸುರಕ್ಷಿತವಾಗಿ ವರ್ಗಾಯಿಸತಕ್ಕದ್ದು.
2. ಆಡಳಿತ ಮಂಡಳಿ ಹಾಗೂ ಬದಲಾವಣೆಯಿಂದ ವಿದ್ಯಾರ್ಥಿಗಳೂ ಮತ್ತು ಪೋಷಕರಿಂದ ಯಾವುದೇ ದೂರುಗಳು ಬರದಂತೆ ಕಾಲೇಜು ಮತ್ತು ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಬಗೆಹರಿಸಿಕೊಳ್ಳತಕ್ಕದ್ದು; ಕಾಲೇಜಿಗೆ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸುರಕ್ಷಿತವಾಗಿ ಹೊಸ ಆಡಳಿತ ಮಂಡಳಿ ಹಾಗೂ ವಿಳಾಸಕ್ಕೆ ವರ್ಗಾಯಿಸತಕ್ಕದ್ದು;
3. ಸದರಿ ಮಹಾವಿದ್ಯಾಲಯದಲ್ಲಿರುವ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯನ್ನು ಮುಂದುವರೆಸತಕ್ಕದ್ದು.
4. ಈ ಕಾಲೇಜಿನ ಸಂಯೋಜನೆ / ಮುಂದುವರಿಕೆ ಸಂಯೋಜನೆಗೆ ಪೂರಕವಾಗಿ ವಿಧಿಸಲಾಗಿರುವ ಷರತ್ತುಗಳು ಯಥಾವತ್ತಾಗಿ ಮುಂದುವರಿಯುತ್ತವೆ ಮತ್ತು ಇವುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
5. ಈ ಹಿಂದಿನ ಆಡಳಿತ ಮಂಡಳಿಯು ಸದರಿ ಪದವಿ ಮತ್ತು ಎಂ.ಎಸ್.ಡಬ್ಲ್ಯೂ. ಮಹಾವಿದ್ಯಾಲಯಗಳನ್ನು ಬಿಟ್ಟುಕೊಡುವ/ ಹೊಸ ಆಡಳಿತ ಮಂಡಳಿಗೆ ಹಸ್ತಾಂತರಿಸುವುದಕ್ಕೆ ಹಾಗೂ ಹಿಂದಿನ ಸ್ಥಳದಲ್ಲಿ ಪದವಿ ಮತ್ತು ಎಂ.ಎಸ್.ಡಬ್ಲ್ಯೂ. ಮಹಾವಿದ್ಯಾಲಯಗಳನ್ನು ಮುಚ್ಚುವ ಹಾಗೂ ಹೊಸ ಸ್ಥಳಕ್ಕೆ ಸ್ಥಳಾಂತರಿಸುವುದಕ್ಕೆ ಸಂಬಂಧಿಸಿದಂತೆ ಒಂದೇ ಆದೇಶದಲ್ಲಿ ನಮೂದಿಸಿ ಹೊರಡಿಸತಕ್ಕದ್ದು. ಮತ್ತು ಇದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು.
6. ನಿಯಮಗಳನ್ವಯ ಸ್ಥಳಾಂತರಗೊಳ್ಳುವ ಸ್ಥಳದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಸ ಆಡಳಿತ ಮಂಡಳಿಯು ಕಲ್ಪಿಸತಕ್ಕದ್ದು.
7. ಆಡಳಿತ ಮಂಡಳಿಯು ಪ್ರಸ್ತುತ ಶಾಲೆಯನ್ನು ಪುನ: ಬೇರೆ ಆಡಳಿತ ಮಂಡಳಿಗೆ ಯಾವುದೇ ಕಾರಣಕ್ಕೂ ಹಸ್ತಾಂತರಿಸತಕ್ಕದ್ದಲ್ಲ.
8. ಸದರಿ ಟ್ರಸ್ಟ್ ಹಾಗೂ ಮಹಾವಿದ್ಯಾಲಯಗಳು ಸ್ಥಳಾಂತರಗೊಂಡ ಸ್ಥಳದಲ್ಲಿ ಆರಂಭವಾದ ದಿನಾಂಕದಿಂದ ಅದನ್ನು ಹೊಸದಾಗಿ ಆರಂಭವಾದ ಪದವಿ ಮಹಾವಿದ್ಯಾಲಯಗಳು ಎಂದು ಪರಿಗಣಿಸಲಾಗುವುದಲ್ಲದೇ ಹಿಂದಿನ ಅವಧಿಯನ್ನು ಅನುದಾನ, ಆರ್ಥಿಕ ಅಥವಾ ಇನ್ನಿತರ ಯಾವುದೇ ಸರ್ಕಾರದ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲ.
9. ಈ ಹಸ್ತಾಂತರವನ್ನು ಜಿಲ್ಲಾ ಸಹಕಾರ ಸಂಘಗಳ ನಿಬಂಧಕರ ಅಭಿಪ್ರಾಯ/ಸಹಮತಿ ಪಡೆದು ವರ್ಗಾಯಿಸಲು ಕ್ರಮವಹಿಸುವುದು.

ಟ್ರಸ್ಟ್‌ನ / ಕಾಲೇಜಿನ ನಾಮಫಲಕ, ಮುಂತಾದವುಗಳ ಬಗ್ಗೆ ಕಾಲೇಜಿನ ಪ್ರಾಂಶುಪಾಲರು ಕ್ರಮ ತೆಗೆದುಕೊಳ್ಳತಕ್ಕದ್ದು. ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಶ್ವವಿದ್ಯಾನಿಲಯದ ಕುಲಸಚಿವರು / ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ / ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಅವರಿಗೆ ಕೂಡಲೇ ವರದಿ ಮಾಡತಕ್ಕದ್ದು.

ಆದೇಶದ ಮೇರೆಗೆ

ಕುಲಸಚಿವರು.

**ಇವರಿಗೆ:**

1. ಅಧ್ಯಕ್ಷರು/ಕಾರ್ಯದರ್ಶಿ, ಶಿಶುವಿಹಾರ ಸಂಸ್ಥೆ, ಡಾ. ಗೋಪಾಲಸ್ವಾಮಿ ರಸ್ತೆ, ಲಕ್ಷ್ಮೀಪುರಂ, ಮೈಸೂರು
2. ಪ್ರಾಂಶುಪಾಲರು, ಗೋಪಾಲಸ್ವಾಮಿ ಕಾಲೇಜ್ ಆಫ್ ಪ್ರೊಫೆಷನಲ್ ಸ್ಟಡೀಸ್, #169/1, ಹೊಸ ಸಂಖ್ಯೆ ಎಫ್29/1, 3ನೇ ಹಂತ, ಕೈಗಾರಿಕಾ ಪ್ರದೇಶ,ಫೋರ್ಟ್ ಮೊಹಲ್ಲಾ, ಮೈಸೂರು-570 008.
3. ಅಧ್ಯಕ್ಷರು/ಕಾರ್ಯದರ್ಶಿ, ಮಹಾರಾಜ ಎಜುಕೇಷನ್ ಟ್ರಸ್ಟ್(ರಿ), (ಎಂ.ಇ.ಟಿ), # 48, ಕಾಮಾಕ್ಷಿ ಆಸ್ಪತ್ರೆ ರಸ್ತೆ, 13ನೇ ಮುಖ್ಯ ರಸ್ತೆ, ಕುವೆಂಪುನಗರ, ಮೈಸೂರು
4. ಪ್ರಾಂಶುಪಾಲರು, ಎಂ.ಐ.ಟಿ. ಪ್ರಥಮ ದರ್ಜೆ ಕಾಲೇಜು, #169/2, 3ನೇ ಹಂತ, ಪೋರ್ಟ್ ಮೊಹಲ್ಲಾ, ಮಾನಂದವಾಡಿ ರಸ್ತೆ, ಮೈಸೂರು
5. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು-01.
6. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
7. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು-560 001.
8. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಜೆ.ಎಲ್.ಬಿ. ರಸ್ತೆ, ಮೈಸೂರು.
9. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಉಪಕುಲಸಚಿವರು (ಶೈಕ್ಷಣಿಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
12. ಕುಲಪತಿಗಳ/ಕುಲಸಚಿವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಅಧೀಕ್ಷಕರು, ಸಿಡಿಸಿ/ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

CDC-2